# ನಿಮ್ಮ ಮೊಬೈಲ್‌ನಲ್ಲಿ ಏನೇನಿದೆ ಗೊತ್ತಾ?



■ ಕಿರಣ್ ಇಜಿಮಾನ್

ಕೈಯಲ್ಲೊಂದು ಸ್ಮಾರ್ಟ್‌ಫೋನ್ ಹಿಡಿದಿದ್ದರೆ ತಾನೊಬ್ಬ ಮಹಾನ್ ಸ್ಮಾರ್ಟ್ ಎನ್ನುವುದೇ ಬಹುತೇಕರ ಅನಿಸಿಕೆ. ಸ್ಮಾರ್ಟ್‌ಫೋನ್ ಇಲ್ಲದವ ಇಂದು ಅನಕ್ಷರಸ್ಥ ಎನ್ನುವಷ್ಟರ ಮಟ್ಟಿಗೆ ಭ್ರಮೆ ಜನರನ್ನು ಆವರಿಸಿದೆ.

ಆ್ಯಂಡ್ರಾಯ್ಡ್ ಸಾಫ್ಟ್‌ವೇರ್ ಹೇಗೆ ಜನಸ್ನೇಹಿಯಾಗಿ ಬೆಳೆಯಿತೋ, ಆಗ ದೇಶೀಯ ಮತ್ತು ವಿದೇಶಿ ಬ್ರಾಂಡ್‌ಗಳ ಕಡಿಮೆ ಬೆಲೆಯ ಸ್ಮಾರ್ಟ್‌ಫೋನ್ ಮಾರುಕಟ್ಟೆಗೆ ಲಗ್ಗೆ ಇಟ್ಟವು. ಇದರ ಅಪರಿಮಿತ ಆ್ಯಪ್ ಮತ್ತು ಸೌಲಭ್ಯಗಳು ಅದ್ಭುತ ಎನಿಸುವಂತೆ ಕಂಡವು.

ಇಂದು ಭಾರತ ಸ್ಮಾರ್ಟ್‌ಫೋನ್ ಬಳಕೆಯಲ್ಲಿ ಅತೀ ಹೆಚ್ಚು ಜನರನ್ನು ಹೊಂದಿದ ರಾಷ್ಟ್ರ. ಇಷ್ಟಕ್ಕೂ ಸ್ಮಾರ್ಟ್‌ಫೋನ್ ಉಳ್ಳವರೆಲ್ಲರೂ ಸ್ಮಾರ್ಟ್ ಆಗಿರುತ್ತಾರೆ ಎಂದರೆ ನಿಮ್ಮ ಊಹೆ ತಪ್ಪು. ಈ ಫೋನ್‌ಗಳನ್ನು ಬಳಸುವ ಬಹಳಷ್ಟು ಮಂದಿಗೆ ಅದರಲ್ಲಿನ ಸೌಲಭ್ಯದ ಕಾಲುಭಾಗ ಬಳಸಲು ಬರುವುದಿಲ್ಲ. ಅದರ ಸಾಧ್ಯತೆಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಬಹುತೇಕ ಸಂದರ್ಭದಲ್ಲಿ ಜನರು ಕೇವಲ ಕರೆ ಮಾಡಲು, ಸಾಮಾಜಿಕ ಜಾಲತಾಣಕ್ಕೆ ಭೇಟಿ ನೀಡಲು ಮತ್ತು ವಾಟ್ಸಪ್‌ನಂತಹ ಮೆಸೇಜಿಂಗ್ ಸೇವೆಗಳನ್ನು ಮಾತ್ರ ಬಳಸುತ್ತಾರೆ. ಅದನ್ನು ಹೊರತುಪಡಿಸಿ ಅದರಾಚೆ ಏನಿದೆ ಎಂದು ನೋಡಲು ಹೋಗುವುದಿಲ್ಲ.

ಇನ್ನು ಸಂದೇಶ, ಫೋಟೊ, ವಿಡಿಯೊ ಮತ್ತಿತರ ಮನೋರಂಜನಾತ್ಮಕ ಅಂಶಗಳನ್ನು ಧಾರಾಳವಾಗಿ ಹಂಚಿಕೊಳ್ಳಲು ಸಾಮಾಜಿಕ ಜಾಲತಾಣಗಳು ಮತ್ತು ಮೆಸೇಜಿಂಗ್ ಸೇವೆ ಒದಗಿಸುವ ಆ್ಯಪ್‌ಗಳು ಅನುವು ಮಾಡಿಕೊಡುತ್ತವೆ. ಈ ಸೇವೆ ಉಚಿತವಾಗಿದ್ದರೂ, ಅಂತರ್ಜಾಲ ಬಳಕೆಗೆ ಶುಲ್ಕ ಪಾವತಿಸಬೇಕು.

ಹೊಸ ಸ್ಮಾರ್ಟ್‌ಫೋನ್ ಕೊಂಡ ಹೊಸದರಲ್ಲಿ ಅದನ್ನು ನೀವು ಆಯಾ ಪ್ಲಾಟ್‌ಫಾರ್ಮ್‌ನ ಅಂತರ್ಜಾಲ ತಾಣದಲ್ಲಿ ನೋಂದಣಿ ಮಾಡಿಕೊಳ್ಳಬೇಕು. (ಪ್ಲೇ ಸ್ಟೋರ್, ಆ್ಯಪಲ್ ಸ್ಟೋರ್, ವಿಂಡೋಸ್ ಸ್ಟೋರ್ ಇತ್ಯಾದಿ) ಹಲವು ಸಂದರ್ಭದಲ್ಲಿ ಈ ರೀತಿಯ ನೋಂದಣಿ ಅಗತ್ಯವಾಗಿ ಬೇಕು ಎನ್ನುವ ಸಾಮಾನ್ಯ ಜ್ಞಾನವೂ ಜನರಿಗೆ ಇರುವುದಿಲ್ಲ. 'ಅದೆಲ್ಲಾ ಏನೂ ಬೇಡ ಸಾರ್, ಸುಮ್ನೆ ಫೇಸ್‌ಬುಕ್, ವಾಟ್ಸಪ್ಪು ಬಂದ್ರೆ ಸಾಕು' ಎನ್ನುವವರೇ ಹೆಚ್ಚು. ಹಲವೆಡೆ ಅಂಗಡಿಯವರೇ ಅದಕ್ಕಾಗಿಯೇ ಒಂದು ಜಿ ಮೇಲ್ ಇಲ್ಲವೇ ಔಟ್‌ಲುಕ್‌ನಂತಹ ಇ-ಮೇಲ್ ಐಡಿ ಹೊಂದಿರುತ್ತಾರೆ. ಅವರೇ ಆ ಐಡಿ ಹಾಕಿ, ಹೊಸ ಫೋನ್ ರಿಜಿಸ್ಟರ್ ಮಾಡಿ ಆ್ಯಪ್ ಡೌನ್‌ಲೋಡ್ ಮಾಡಿಕೊಡುತ್ತಾರೆ. (ಇಲ್ಲವೇ ಆತನೇ ಒಂದು ಹೊಸ ಐಡಿ-ಪಾಸ್‌ವರ್ಡ್ ರಚಿಸಿ ಕೊಡುತ್ತಾನೆ!)

ಕೆಲ ಸಂದರ್ಭದಲ್ಲಿ ಹೀಗೂ ಇರುತ್ತದೆ: ಯಾರೋ ಒಬ್ಬರಲ್ಲಿ ಇ-ಮೇಲ್ ಐಡಿ ಇದ್ದವನು ಹೊಸಬರಿಗೆ ತನ್ನ ಐಡಿ ಹಾಕಿ ಫೋನ್ ರಿಜಿಸ್ಟರ್ ಮಾಡಿಕೊಡುತ್ತಾನೆ. ಫೋನ್ ಕೊಂಡವನಿಗೆ ಇ-ಮೇಲ್ ಅಗತ್ಯ ಇರುವುದಿಲ್ಲ, ಬದಲಾಗಿ ಆತನಿಗೆ ಕೆಲವು ಆ್ಯಪ್ ಮತ್ತು ಗೇಮ್ಸ್ ಮಾತ್ರ ಬೇಕಾಗಿರುತ್ತದೆ. ಹಾಗಾಗಿ ಈ ಬಗ್ಗೆ ಆತ ತಲೆ ಕೆಡಿಸಿಕೊಳ್ಳುವುದಿಲ್ಲ. ಇತ್ತ ಕಡೆ ರಿಜಿಸ್ಟರ್ ಮಾಡಿದ ಇ-ಮೇಲ್ ಐಡಿಯಲ್ಲಿ ಬಳಕೆದಾರನ ಆ್ಯಪ್ ವಿವರಗಳು ಮತ್ತು ಅದರ ಚಟುವಟಿಕೆಗಳು ದಾಖಲಾಗುತ್ತವೆ. ಅದನ್ನು ಆತ ದುರ್ಬಳಕೆ ಬಳಕೆ ಮಾಡಿಕೊಳ್ಳಲೂಬಹುದು! ಸ್ಮಾರ್ಟ್‌ಫೋನ್ ಬಳಕೆಯಲ್ಲಿ ಹೇಗೆ ಮುಗ್ಧ ಜನರನ್ನು ಮೋಸ ಮಾಡಬಹುದು ಎನ್ನುವುದಕ್ಕೆ ಇದು ಚಿಕ್ಕ ಉದಾಹರಣೆ!

ಇನ್ನು ಹೊಸ ಫೋನ್‌ನಲ್ಲಿ ಕೆಲವೊಂದು ಡಿಫಾಲ್ಟ್ ಸೆಟ್ಟಿಂಗ್‌ಗಳಿರುತ್ತವೆ. ಅದರ ಪ್ರಕಾರ ನೀವು ತೆಗೆಯುವ ಇಲ್ಲವೇ ಹಂಚಿಕೊಳ್ಳುವ ಫೋಟೋಗಳು, ಸಂದೇಶಗಳು, ವಿಡಿಯೋಗಳು ಅದರಲ್ಲಿನ ಫೋಲ್ಡರ್‌ನಲ್ಲಿ ಸೇವ್ ಆಗುತ್ತಾ ಹೋಗುತ್ತದೆ. ಇನ್ನು ಹುಡುಗಿಯರ ಸೆಲ್ಫಿ ಹುಚ್ಚು ಗೊತ್ತೇ ಇದೆ. ವಾಟ್ಸಪ್ ಮೂಲಕ ಕಳುಹಿಸುವ ಮತ್ತು ಸ್ವೀಕರಿಸುವ ಫೈಲ್‌ಗಳು ಕೂಡಾ ಫೋನ್‌ನಲ್ಲಿ ಸೇವ್ ಆಗುತ್ತವೆ. ಇನ್ನೊಂದು ವಿಷಯವೆಂದರೆ, ಈ ಫೈಲ್‌ಗಳು ಆನ್‌ಲೈನ್‌ನ ಕ್ಲೌಡ್ ಸ್ಟೋರೇಜ್‌ನಲ್ಲೂ ಸೇವ್ ಆಗುತ್ತಿರಬಹುದು. ಅಂದರೆ ನೀವು ರಿಜಿಸ್ಟರ್ ಮಾಡಿದ ಇ-ಮೇಲ್‌ಗೆ (ನಿಮ್ಮದೇ ಸ್ವಂತ ಐಡಿಯೂ ಆಗಿರಬಹುದು) ಇಂತಿಷ್ಟು ಜಿಬಿ ಕ್ಲೌಡ್ ಸ್ಟೋರೇಜ್ (ಅಂತರ್ಜಾಲದಲ್ಲಿ ಇ-ಮೇಲ್ ಸೇವೆ ಒದಗಿಸುವ ಸಂಸ್ಥೆಗಳು ನೀಡುವ ಉಚಿತ ಸ್ಥಳಾವಕಾಶ) ಎಂದು ನೀಡುತ್ತಾರೆ. ಈ ಸೇವೆಯನ್ನು ನೀವು ಇಚ್ಛಿಸಿದರೆ ಬಳಕೆ ಮಾಡಬಹುದು ಇಲ್ಲವೇ ಬಿಡಬಹುದು. ಆದರೆ ನಿಮ್ಮ ಫೋನ್‌ನಲ್ಲಿ ಅಟೋ ಅಪ್‌ಲೋಡ್, ಬ್ಯಾಕಪ್ ಫೈಲ್ಸ್ ಎಂಬ ಆಪ್ಷನ್ ಆನ್ ಇದ್ದರೆ ನೀವು ಹಂಚಿಕೊಳ್ಳುವ ಮತ್ತು ಫೋನ್‌ನಲ್ಲಿ ಶೇಖರಿಸುವ ಫೈಲ್‌ಗಳೆಲ್ಲವೂ ಅಂತರ್ಜಾಲದ ಕ್ಲೌಡ್ ಸ್ಪೇಸ್‌ನಲ್ಲಿ ದಾಖಲಾಗುತ್ತವೆ.

ಇಂತಹ ಸಂದರ್ಭದಲ್ಲಿ ನಿಮ್ಮ ಖಾಸಗಿ ಫೋಟೊಗಳು, ವಿಡಿಯೋಗಳು, ಏಕಾಂತವಾಗಿ ಇಲ್ಲವೇ ಗೆಳೆಯರೊಂದಿಗೆ ಕಳೆದ ಖಾಸಗಿ ಕ್ಷಣಗಳ ಚಿತ್ರ ಕೂಡ ಅಂತರ್ಜಾಲ ಸೇರುತ್ತವೆ. ಆದರೆ ನಿಮಗೆ ಇದರ ಅರಿವೇ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ನೀವು ಫೋನ್ ರಿಜಿಸ್ಟರ್ ಮಾಡಿದ ಇ-ಮೇಲ್ ಹೊಂದಿರುವ ಅಂಗಡಿಯವ ಇಲ್ಲವೇ ಪರಿಚಯದವನ ಕೈಗೆ ಈ ಫೈಲ್‌ಗಳೇನಾದರೂ ಸಿಕ್ಕರೆ ನಿಮ್ಮ ಗತಿಯೇನು ಎಂದು ಸ್ವಲ್ಪ ಯೋಚಿಸಿ!

ಆಗಾಗ ಮಾಧ್ಯಮಗಳಲ್ಲಿ ವರದಿಯಾಗುವಂತೆ ಸೆಲೆಬ್ರಿಟಿಗಳ ಖಾಸಗಿ ಕ್ಷಣಗಳ ಚಿತ್ರಗಳು ಸೋರಿಕೆಯಾಗುವುದು ಕೂಡಾ ಇದೇ ಪರಿಸ್ಥಿಯಲ್ಲಿ. ಆದರೆ ಅಲ್ಲಿ ಹ್ಯಾಕರ್‌ಗಳ ಕೈವಾಡವಿರುತ್ತದೆ! ಕೆಲವರಿಗೆ ತಮ್ಮ ಸ್ಮಾರ್ಟ್‌ಫೋನ್ ಸೆಟ್ ಬಗ್ಗೆ ಮಾತ್ರ ಕಾಳಜಿ, ಕೆಳಗೆ ಬಿದ್ದರೆ ಎಲ್ಲಿ ಒಡೆಯುವುದೋ, ಎಲ್ಲಿ ಗೀರು ಬೀಳುವುದೋ ಎಂದು. ಇತರ ತೊಂದರೆಗಳ ಬಗ್ಗೆ ಅರಿವಿರುವುದಿಲ್ಲ.

ಸ್ಮಾರ್ಟ್‌ಫೋನ್ ರಿಪೇರಿಗೆ ಕೊಡುವಾಗ ಇಲ್ಲವೇ ಮಾರುವಾಗ ಸ್ವಲ್ಪ ಎಚ್ಚರ ವಹಿಸಿದರೆ ನಿಮ್ಮ ಮಾನ ನಿಮ್ಮ ಕೈಯಲ್ಲಿ ಉಳಿಯುತ್ತದೆ. ಇಲ್ಲದಿದ್ದರೆ ಮಾನ ಮೂರಾಬಟ್ಟೆಯಾಗುತ್ತದೆ.

ಸ್ಮಾರ್ಟ್‌ಫೋನ್ ಬಳಸುವಾಗ ಸ್ಮಾರ್ಟ್ ಆಗಿರಿ. ಬರೇ ಸ್ಮಾರ್ಟ್‌ಫೋನ್ ಇಟ್ಟುಕೊಂಡು ಬೇಕಾಬಿಟ್ಟಿ ಬಳಸಿದರೆ, ಮುಂದೆ ಅದೇ ಸ್ಮಾರ್ಟ್‌ಫೋನ್ ನಿಮ್ಮ ಶತ್ರುವಾಗುವುದರಲ್ಲಿ ಸಂಶಯವಿಲ್ಲ. ಹಾಗೆಯೇ, ಮೊಬೈಲ್‌ನಲ್ಲಿ ಹೋದ ಮಾನ, ಕಂಪ್ಲೇಂಟ್ ಕೊಟ್ಟರೂ ಬಾರದು. ■